**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಸಿ.ಸಿ. 587/2020</u>**

**<u>ಪಿಡಬ್ಲೂ-3</u>**

**<u>ಸಿಡಬ್ಲೂ-1</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಜಯ್ಯ |
| ತಂದೆಯ ಹೆಸರು | - | ಚೆಲುವಯ್ಯ |
| ವಯಸ್ಸು | - | 66 ವರ್ಷ |
| ಕೆಲಸ | - | ವ್ಯವಸಾಯ |
| ವಾಸ | - | ನರಚನಹಳ್ಳಿ ಗ್ರಾಮ |

**<u>ದಿನಾಂಕ 02-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ</u>**

ಆರೊಪಿ ಮತ್ತು ಚಾಸಾ 1 ಮತ್ತು 2 ನಮ್ಮ ಸಂಬಂಧಿಕರು. ನಾನು ಯಾವುದೇ ಗಲಾಟೆಯನ್ನು ನೋಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಚಾಸಾ 1 ರವರಿಗೆ ಆರೋಪಿ ಯಾವುದೇ ಕಲ್ಲಿನಿಂದ ಹಲ್ಲೆ ಮಾಡಿರುವುದಿಲ್ಲ. ನಾನು ಆರೋಪಿಯ ವಿರುದ್ಧ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನೋಡಿ ಗುರುತಿಸಿರುವುದಿಲ್ಲ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**<u>ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ</u>**

ದಿಃ 23-12-2019 ರಂದು ಸಂಜೆ 4.30 ಗಂಟೆ ಸಮಯಲ್ಲಿ ರಾಮಯ್ಯನ ಮಗ ಮಹೇಶ ಖಾಲಿ ಜಾಗದಲ್ಲಿ ಹುಲ್ಲನ್ನು ತಂದು ಮೇದೆಯನ್ನು ಹಾಕುತ್ತಿದ್ದಾಗ, ಇದನ್ನು ನೋಡಿದ ಚಾಸಾ 1 ಮಹೇಶ ಏ ಕೆ ನಮ್ಮ ಜಾಗದಲ್ಲಿ ಹುಲ್ಲು ತಂದು ಹಾಕುತ್ತಿದ್ದೀಯಾ ಎಂದು ಮಹೇಶನನ್ನು ಕೇಳಿದನು ಎಂದರೆ ಸರಿಯಲ್ಲ ಅದಕ್ಕೆ ಆರೋಪಿ ಮಹೇಶ ಅಶೋಕನ ಮೇಲೆ ಜಗಳ ತೆಗೆದು ಅಲ್ಲೇ ಬಿದ್ದಿದ್ದ ಒಂದು ಕಲ್ಲನ್ನು ಎತ್ತಿಕೊಂಡು ಚಾಸಾ 1 ರವರು ತಲೆಗೆ ಹೊಡೆದು ರಕ್ತಗಾಯ ಪಡಿಸಿದನು ಎಂದರೆ ಸರಿಯಲ್ಲ. ಮಹೇಶನು ಹೊಡೆದ ಏಟಿಗೆ ಚಾಸಾ 1 ಅಶೋಕ ಸ್ಥಳದಲ್ಲಿ ಬಿದ್ದನು ಎಂದರೆ ಸರಿಯಲ್ಲ.

ನಂತರ ನಾನು ಶೇಖರ, ರಾಜಮ್ಮ ಎಲ್ಲರೂ ಹೋಗಿ ಜಗಳವನ್ನು ಬಿಡಿಸಿ ಏಟಾಗಿದ್ದ ಅಶೋಕನನ್ನು ಚಾಸಾ 2 ಶೇಖರ ಒಂದು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದನು ಎಂದರೆ ಸರಿಯಲ್ಲ. ನಾನು ಸದರಿ ಘಟನೆಯನ್ನು ಖುದ್ದಾಗಿ ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ಹಾಗೆ ತನಿಖಾಧಿಕಾರಿಗಳ ಮುಂದೆ ದ್ಲಿಃ 22-05-2019 ರಂದು ನನ್ನ ಹೇಳಿಕೆಯನ್ನು ನಿಪಿ 1 ರಂತೆ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಚಂದನ್ ಎಸ್ )

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ